ಮರುದಿನವೇ ಶ್ಯಾಮಸುಂದರನನ್ನು ಭೇಟಿಯಾಗಲು ನಿರ್ಧರಿಸಿದರು.

ಮರುದಿನ ಪ್ರಸಾದ್‌ನ ಗೆಳೆಯ ಮನೋಹರರ ಮಗಳ ಮದುವೆಯ ರಿಸೆಪ್ಷನ್ ಇತ್ತು. ಕುಣಾಲ್ ಬರಲೊಪ್ಪಲಿಲ್ಲ. 'ನನಗೆ ಮನಸ್ಸಿಲ್ಲವಮ್ಮ, ಯಾವುದಾದರೊಂದು ಮೂವಿ ನೋಡ್ಕೊಂಡು ಬಂದು ಮನೇಲೇ ಊಟ ಮಾಡ್ತೀನಿ. ನೀವು ಹೋಗಿ ಬನ್ನಿ' ಎಂದ. ಮದುವೆಗೆ ಬಂದವರು ನವದಂಪತಿಗಳನ್ನು ವಿಶ್ ಮಾಡಿ ಊಟಕ್ಕೆ ನಡೆದರು. ಸೂಪು ಮುಗಿಸಿ ರೋಟಿ ತಿನ್ನುತ್ತಿದ್ದಂತೆಯೇ ಹಿಂದಿನಿಂದ ಯಾರೋ 'ಹಲೋ..ಪ್ರಸಾದ್ ಸರ್.. ' ಎಂದಿದ್ದರು. ತಿರುಗಿ ನೋಡಿದರೆ ಪರಿಚಿತ ಮುಖ. ಆದರೆ ಹೆಸರು ನೆನಪಾಗುತ್ತಿಲ್ಲ. 'ನಾನು ಯಾರೂಂತ ತಿಳೀಲಿಲ್ಲವಾ? ನೀವು ಬೇಗನೇ ನನ್ನನ್ನು ಹುಡುಕಿಕೊಂಡು ಬರ್ತೀರಾ ಅಂತ ಕಾಯ್ತಿದ್ದೆ.. ..ಪರವಾಗಿಲ್ಲ, ಬಹಳ ಪೇಶೆನ್ಸ್ ಇದೆ ನಿಮಗೆ..' ಎಂದ ಆ ವ್ಯಕ್ತಿ ಊಟ ಮುಗಿಸಿ ಕೈಯಲ್ಲಿ ಐಸ್‌ಕ್ರೀಮ್ ಹಿಡಿದು ಮಾತನಾಡುತ್ತಿದ್ದ. ಪ್ರಸಾದ್ ಪ್ರಶ್ನಾರ್ಥಕ ದೃಷ್ಟಿಯಲ್ಲಿ ನೋಡುತ್ತ 'ಎಲ್ಲೋ ನೋಡಿದ ಹಾಗಿದೆ. ಆದರೆ ಸಾರಿ..ನಿಮ್ಮ ಹೆಸರು ನೆನಪಾಗ್ತಾ ಇಲ್ಲ' ಎಂದರು. 'ಹ್ಞೂಂ, ಇರಿ, ಎಲ್ಲಾ ನೆನಪಿಸ್ತೀನಿ. ನಾನು ಶ್ಯಾಮ ಸುಂದರ್... ...1995.. ..ಬಿ.ಎಲ್.ಎನ್. ಪ್ರಾಜೆಕ್ಟ್.. ಕೀರ್ತಿ, ವಾರುಣಿ, ಅಶುತೋಷ್.. ..ಜ್ಞಾಪಕ ಬಂತಾ? ನನಗಾಗ ನೀವೆಷ್ಟು ತೊಂದರೆ ಕೊಟ್ರಿ ನೆನಪಿದ್ಯಾ? ಹೇಳಿಕೊಡದೇ ಸತಾಯಿಸ್ತಿದ್ರಿ. ಬರೀ ಮಿಡಲ್ ಮ್ಯಾನೇಜ್ಮೆಂಟ್ ಜೊತೆ ಮಾತಾಡ್ಕೊಂಡು ಟಾರ್ಗೆಟ್ ಕೊಡ್ತಿದ್ರಿ. ಈಗ ಮಗನ ಪರಿಸ್ಥಿತಿ ಹೇಗಿದೆ? ನೋಡಿ ಕಷ್ಟ ಆಗ್ತಾ ಇದ್ಯಲ್ಲ. ನನಗೂ ಹೀಗೇ ಆಗಿದ್ದು. ನಾನೂ ಇದನ್ನೇ ಅನುಭವಿಸಿದ್ದು' ಎಂದ. ಪ್ರಸಾದರ ಮೈಯೆಲ್ಲ ಬಿಸಿಯೇರಿ ಮುಖ ಕೋಪದಿಂದ ಕೆಂಪಾಯಿತು. ಮನದಾಳದಲ್ಲಿ ಹೆಕ್ಕಿದಾಗ ಶ್ಯಾಮಸುಂದರ ಮೂಡಿ ಬಂದ. ಉತ್ತರ ಕೊಡಲು ಬಾಯ್ತೆರೆಯುವಷ್ಟರಲ್ಲಿ ಆಸಾಮಿ ಹಣ್ಣು ತರಲು ಹೋಗಿಯಾಗಿತ್ತು.

ಹೌದು, ಆಗ ಅದೇ ತಾನೇ ಪ್ರಸಾದ್‌ಗೆ ಮ್ಯಾನೇಜರ್ ಎಂದು ಬಡ್ತಿ ದೊರಕಿತ್ತು. ಸ್ವತಂತ್ರವಾಗಿ ನಿಭಾಯಿಸಲು ಮೊದಲು ಕಷ್ಟದ ಪ್ರಾಜೆಕ್ಟೇ ಒದಗಿ ಬಂದಿತ್ತು. ಮನೆಯಲ್ಲಿ ತಂದೆಗೆ ಕ್ಯಾನ್ಸರ್ ಕೊನೆಯ ಹಂತ. ಆಸ್ಪತ್ರೆಯ ಅಲೆದಾಟ. ಈ ಮಧ್ಯೆ ಡೆವಲಪರ್ಸ್‌ಗಳಿಂದ ಕೆಲಸ ಮಾಡಿಸಿಕೊಂಡು ಸೀನಿಯರ್ ಮ್ಯಾನೇಜರ್‌ಗಳಿಗೆ ಒಪ್ಪಿಸಬೇಕು. ಹೆಣಗಾಟ ವಿಪರೀತವಾಗುತ್ತಿತ್ತು. ಒಳ್ಳೆಯ ರಿಸೋರ್ಸ್‌ಗಳಿಲ್ಲ. ಇದ್ದ ಶ್ಯಾಮಸುಂದರ್, ಅಶುತೋಷ್ ಮುಂತಾದವರಿಗೆ ಕೆಲಸ ಗೊತ್ತಿಲ್ಲ. 'ಬೇರೆ ರಿಸೋರ್ಸ್ ಕೊಡಿ' ಎಂದು ಎಚ್.ಆರ್.ನವರಿಗೆ ಕೇಳಿದಾಗ 'ಅವರಿಂದಲೇ ಮಾಡಿಸಿಕೊಳ್ಳಿ' ಎಂಬ ಉತ್ತರ ಬಂದಿತ್ತು. ಇವರೋ.. ..ಪ್ರತಿಯೊಂದನ್ನೂ ಹೇಳಿಕೊಡಬೇಕೆಂದು ಬಯಸುತ್ತಿದ್ದರು. ಅದೂ ಪಕ್ಕದಲ್ಲಿ ಕುಳಿತು.. .. ಪ್ರೈವೇಟ್ ಟ್ಯೂಶನ್ ಟೀಚರ್ ಥರಾ. ಕಲಿಯಲು ಆರು ತಿಂಗಳು ಸಮಯ ಬೇಕಾಗುತ್ತೆ. ಬೇಗ ಸಾಧ್ಯವಿಲ್ಲ' ಎಂಬ ಉದ್ಧಟತನದ ಉತ್ತರ ಬಂದಿತ್ತು. ರೋಸಿ ಹೋಗಿ 'ಏನಾದ್ರೂ ಮಾಡಿ. ಇಷ್ಟು ದಿನಗಳಲ್ಲಿ ಮುಗಿಸಿ ಡೆಲಿವರಿ ಮಾಡಿ' ಎಂದು ಟಾರ್ಗೆಟ್ ಕೊಟ್ಟದ್ದಿತ್ತು.





ಚಿತ್ರ ಸೃಜನ್

ಆದರೆ.. ಅದಕ್ಕೆ ಇವನು ಸೇಡು ತೀರಿಸಿಕೊಳ್ಳುತ್ತಿದ್ದಾನಾ? ಕುಣಾಲ್‌ಗೆ ತೊಂದರೆ ಕೊಟ್ಟು..

ಅಷ್ಟರಲ್ಲೇ ಶ್ಯಾಮಸುಂದರ ಫ್ರುಟ್ಸ್‌ಸಲಾಡ್‌ನೊಂದಿಗೆ ಪ್ರತ್ಯಕ್ಷವಾಗಿದ್ದ. 'ನೆನಪಾಯ್ತಾ ಮಿ.ಪ್ರಸಾದ್?' ಎಂದು ವ್ಯಂಗ್ಯವಾಗಿ ಕೇಳಿದ. 'ಅಫ್‌ಕೋರ್ಸ್' ಎಂದರು ಪ್ರಸಾದ್. 'ಆದರೆ ನೀನೀಥರ ನನ್ನ ಮಗನ ಮೇಲೆ ಸೇಡು ತೀರಿಸ್ಕೋತೀಯಾ ಅಂದ್ಕೊಂಡಿರಲಿಲ್ಲ. ಆಗ ನಾನು ಸ್ಕೂಲ್ ವಿದ್ಯಾರ್ಥಿಗಳ ಥರಾ ಪಕ್ಕದಲ್ಲೇ ಕುಳಿತು ಹೇಳಿಕೊಟ್ಟೆ. ನೀವು ಕಲಿಯಲು ಆರು ತಿಂಗಳ ಸಮಯ ಕೇಳಿದ್ರಿ. ನೆನಪಿದ್ಯಾ.. .ಈಗ ನೀನೂ ಒಬ್ಬ ಮ್ಯಾನೇಜರ್. ಅರ್ಥ ಆಗ್ತಿರಬಹುದು. ಚಿಕ್ಕ ಪುಟ್ಟ ವಿಷಯ ಕಲಿಯಲು ಆರಾರು ತಿಂಗಳು ಸಮಯ ಕೇಳಿದ್ರೆ ಹೇಗೆ ಅಂತ ಗೊತ್ತಾಗುತ್ತಲ್ಲ.. ನಾನೆಂಥ ಒತ್ತಡದಲ್ಲಿದ್ದೆ ಅಂತ ನಿನಗೀಗ ಅರಿವಾಗಿರಬಹುದು. ಆ ಸಮಯ ಬಿಟ್ರೆ ಇಂದಿಗೂ ನಾನು ಪೀಪಲ್ಸ ಮ್ಯಾನೇಜರ್. ನನ್ನ ಕೆಳಗಿರೋ ಹುಡುಗರನ್ನು ಪ್ರೊಟೆಕ್ಟ್ ಮಾಡಿ ಕಲಿಸಿ ಕೆಲಸ ಮಾಡಿಸಿಕೊಳ್ತೇನೆ. ವೆಲ್....ನನ್ನ ಮೇಲಿನ ದ್ವೇಷಕ್ಕೆ ನನ್ನ ಮಗನ ಮೇಲೆ ಪ್ರತೀಕಾರ ತೊಗೊಳ್ತಾ ಇದೀಯಾ? ಇಂಡಸ್ಟ್ರಿ ಹೇಗೇಂತ ನನಗೂ ಗೊತ್ತು. ನಿನಗೂ ಗೊತ್ತು. ಅವನೇನು.. ..ಇದನ್ನ ಬಿಟ್ಟು ಬೇರೊಂದು ಕಂಪನಿಗೆ ಹಾರ್ತಾನಷ್ಟೆ. ನಿನ್ನ ಸೀನಿಯರ್‌ಗೆ ಏನು ಉತ್ತರ ಕೊಡ್ತೀಯಾ ಯೋಚಿಸು. ನಿನ್ನ ಪ್ರಾಜೆಕ್ಟ್ ಗತಿ ನೋಡ್ಕೊ' ಎಂದವರೇ ಅಲ್ಲಿಂದ ಸರಿದುಬಿಟ್ಟರು. ಮುಂದೆ ಊಟ ಮಾಡಲೂ ಮನಸ್ಸಾಗಲಿಲ್ಲ. ಯಾರದೋ ಜೊತೆ ಹರಟುತ್ತ ಊಟ ಮಾಡುತ್ತಿದ್ದ ಸುಗುಣಳನ್ನೂ ಹೊರಡಿಸಿಕೊಂಡು ಹೊರಟರು.

ಕಾಲನ ಚಕ್ರ ಯಾವಾಗ, ಯಾವ ದಿಕ್ಕಿನಲ್ಲಿ ತಿರುಗುವದೆಂದು ಹೇಳಲಾಗುವುದಿಲ್ಲ. ಇಲ್ಲಿ ಆಗಿದ್ದೂ ಅದೇ. ಸಾಮಾನ್ಯವಾಗಿ ಸೀನಿಯರ್ ಮ್ಯಾನೇಜ್ಮೆಂಟ್‌ನವರು ತಮ್ಮ ಮ್ಯಾನೇಜರ್‌ಗಳನ್ನು ಬಿಟ್ಟುಕೊಡದೇ ಅವರ ಪರ ವಹಿಸಿ ಮಾತನಾಡಿ ಅವರನ್ನೇ ಸಮರ್ಥಿಸಿಕೊಳ್ಳುತ್ತಾರೆ. ಡೆವಲಪರ್‌ಗಳ ಮೇಲೆ ಗೂಬೆ ಕೂರಿಸುತ್ತಾರೆ. ಆದರಿಂದು ಎ.ವಿ.ಪಿ. ಮುರುಗನ್ ಶ್ಯಾಮಸುಂದರ್‌ಗೆ ಕರೆ ಕಳುಹಿಸಿದ. ಎಂದಿನಂತೆ ಗತ್ತಿನಿಂದಲೇ ಬಂದವನಿಗೆ 'ಮಿ.ಶ್ಯಾಮ್, ಈಗಾಗಲೇ ಎರಡು ಬಾರಿ ಎಚ್.ಆರ್.ನವರಿಂದ ಕಂಪ್ಲೇಂಟ್ ಬಂದಿದೆ. ಈ ಬಾರಿ ನಿಮ್ಮ ಮತ್ತು ಕುಣಾಲ್‌ನ ಸಮಸ್ಯೆ ಮೇಲಿನವರೆಗೂ ಎಸ್ಕಲೇಟ್ ಆಗಿದೆ. ಆ ಹುಡುಗ ಒಳ್ಳೆ ಕೆಲಸಗಾರ ಅಂತ ಹಳೆ ಮ್ಯಾನೇಜರ್ ಕೃಷ್ಣಮೂರ್ತಿ ಹೇಳ್ತಿದಾರೆ. ಜೊತೆಗೆ ಹೊಸದಾದ ಕ್ಲೌಡ್ ಮೌಂಟಿಂಗ್ ಟೆಕ್ನಾಲಜಿ ಕೂಡ ಚೆನ್ನಾಗಿ ಗೊತ್ತು. ನೀವು ಅವರಿಗೆ ಕೆಲಸಗಳನ್ನು ತಿಳಿಸಿ ಹೇಳಿ ಮಾಡಿಸಿಕೊಳ್ಳಬೇಕೇ ಹೊರತು ಹೀಗೆ ಚಾಟಿ ತೋರಿಸಿ ಅಲ್ಲ. ರಿಸೋರ್ಸ್‌ಗಳ ಪ್ರಾಬ್ಲೆಮ್ ಜಾಸ್ತಿಯಾಗಿದೆ. ನಿತ್ಯ ಬೆಳಗಾದರೆ ಬಿಟ್ಟು ಹೋಗುವವರ ಸಂಖ್ಯೆ ಹೆಚ್ಚಾಗಿದೆ. ನೀವು ನಿಮ್ಮನ್ನು ತಿದ್ದಿಕೊಳ್ಳಲು ಇದು ಕೊನೆಯ ಅವಕಾಶ. ಕ್ಲೌಡ್ ಮೌಂಟಿಂಗ್ ಮೇಲೆ ಹೊಸ ಪ್ರಾಜೆಕ್ಟ್ ಯು.ಎಸ್.ನಿಂದ ಬರ್ತಿದೆ. ಅವನು ನಮಗೆ ಅತ್ಯಗತ್ಯ. ಅವನಿಗೆ ಹೆಚ್ಚಿನ ಪ್ಯಾಕೇಜ್ ಕೊಟ್ಟು ಕೈಲಾಶ್‌ನ ಗ್ರೂಪಿಗೆ ಮೂವ್ ಮಾಡ್ತಾ ಇದೀನಿ. ತಕ್ಷಣ ಅವನನ್ನ ರಿಲೀಸ್ ಮಾಡಿ. ಉಳಿದವರನ್ನೂ ಚೆನ್ನಾಗಿ ನೋಡಿಕೊಳ್ಳಿ. ಅದರವೈಸ್ ಇಟ್ ಮೇ ಕ್ರಿಯೇಟ್ ಬಿಗ್ ಪ್ರಾಬ್ಲೆಮ್ ಫಾರ್ ಯು. ಐ ಹೋಪ್ ಯು ಅಂಡರ್‌ಸ್ಟ್ಯಾಂಡ್' ಎಂದರು. ಶ್ಯಾಮನ ಮೈಯೆಲ್ಲ ಬೆವರೊಡೆದಿತ್ತು. ಉತ್ತರಿಸಲು ತಿಳಿಯದೇ ಬ್ಬೆ..ಬ್ಬೆ..ಎನ್ನುತ್ತ 'ಯ..ಯಸ್ ಸರ್' ಎನ್ನುತ್ತ ಹೊರಬಂದ.

ಸಂಜೆ ಯಕ್ಷಗಾನ ಟಿ.ವಿ.ಯಲ್ಲಿ ಮತ್ತೆ ಕಳೆಗಟ್ಟಿತ್ತು. ಸುಗುಣ ಅತ್ತಲೇ ಕಣ್ಣು ನೆಟ್ಟಿದ್ದಳು. ಚಂದ್ರಹಾಸ ಪತ್ರ ತೆಗೆದುಕೊಂಡು ಬಂದು ದುರ್ಬುದ್ಧಿಯ ಮಗನ ಕೈಗೆ ಕೊಟ್ಟ. ಅವನೂ ಧಿಂಗಣ ಹಾಕಿ ಕುಣಿಯುತ್ತ ಪತ್ರ ಓದಿದ. ತಕ್ಷಣ ತಂದೆಯ ಆಜ್ಞೆಯಂತೆ ಅವಸರದಲ್ಲೇ ತಂಗಿ ವಿಷಯೆಯ ಮದುವೆಯನ್ನು ಚಂದ್ರಹಾಸನೊಂದಿಗೆ ನೆರವೇರಿಸಿದ. ಇತ್ತ ಮುರುಗನ್ ಕುಣಾಲ್‌ನೊಂದಿಗೆ ಖುದ್ದಾಗಿ ಮಾತನಾಡಿದರು. ಅವನೂ ಸೌಮ್ಯವಾಗಿ ತನ್ನ ತೊಂದರೆಗಳನ್ನು ನಿವೇದಿಸಿಕೊಂಡ. ಕೊನೆಗೆ ಹೆಚ್ಚಿನ ಪ್ಯಾಕೇಜ್ ಕೊಟ್ಟು ಕೈಲಾಶ್ ಗ್ರೂಪಿಗೆ ಮೂವ್ ಮಾಡಿದ ವಿಷಯವನ್ನು ಮಿ.ಮುರುಗನ್ ತಿಳಿಸಿ 'ಆಲ್ ದ ಬೆಸ್ಟ್' ಎಂದರು. ಅವನಿಗೆ ಸಂತಸವೋ ಸಂತಸ. ಭರ್ರೆಂದು ಬೈಕ್ ಬಿಟ್ಟುಕೊಂಡು ಸ್ವೀಟ್ಸ್ ಹಿಡಿದುಕೊಂಡು ಮನೆಗೆ ಬಂದಾಗ ವಿಷಯೆ ಕಲ್ಯಾಣ ಮುಗಿದು 'ಮಂಗಳಂ ಭವತು.. ..ಜಯ ಮಂಗಳಂ ಭವತು' ಎನ್ನುವ ಮಂಗಳಪದ ಕೇಳಿ ಬರುತ್ತಿತ್ತು.